ರಾಜ್ಯದಲ್ಲಿ ಬಾಲ ವಿಕಾಸ ಯೋಜನೆ

305 (515) ಶ್ರೀ ಬಸವರಾಜ ರಾಯ ರೆಡ್ಡಿ (ಯಲ್ಬುರ್ಗಿ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಐಸಿಡಿಎಸ್ ಕಾರ್ಯಕ್ರಮದಡಿ ಬರುವ ಒಟ್ಟು ತಾಲ್ಲೂಕುಗಳ ಸಂಖ್ಯೆ; ವಲಯವಾರು ನೀಡಿ?

ಆ) ರಾಜ್ಯದ ಉಳಿದ ತಾಲ್ಲೂಕುಗಳಿಗೆ ಐಸಿಡಿಎಸ್ ಕಾರ್ಯಕ್ರಮವನ್ನು ವಿಸ್ತರಿಸಲು ಸರ್ಕಾರ ಆಲೋಚಿಸುತ್ತಿದೆಯೇ?

ಇ) ಹಾಗಿದ್ದಲ್ಲಿ ಯಾವಾಗ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):-

ಅ) 133

ರಾಜ್ಯ ವಲಯ : 29

ಕೇಂದ್ರ ವಲಯ : 104

ಆ) ಹೌದು.

ಇ) 8ನೇ ಪಂಚವಾರ್ಷಿಕ ಯೋಜನೆಯಲ್ಲಿ.

ಕಾರ್ಮಿಕರಿಗೆ ಕನಿಷ್ಠ ವೇತನದ ನಿಗದಿ

306 (516) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನಿಗದಿ ಪಡಿಸಿರುವ ವಿವಿಧ ವಿಭಾಗಗಳು;

ಆ) ವಿವಿಧ ಕಾರ್ಮಿಕರಿಗೆ ವೇತನ ಹೆಚ್ಚಿಸಲು ಸರ್ಕಾರ ಆಲೋಚಿಸಿದೆಯೆ?

ಇ) ಹಾಗಿದ್ದಲ್ಲಿ ಯಾವಾಗ?

ಈ) ಅಸಂಘಟಿತ ವಿಭಾಗದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ವೇತನ ನಿಗದಿ ಮಾಡಲು ಸರ್ಕಾರ ಆಲೋಚಿಸಿದೆಯೇ?

ಉ) ಹಾಗಿದ್ದಲ್ಲಿ ಯಾವಾಗ?

ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):-

ಅ) ಕನಿಷ್ಠ ವೇತನ ಕಾಯ್ದೆ ಅನ್ವಯ ಈ ಕೆಳಕಂಡ ಅನುಸೂಚಿತ ಉದ್ಯಮಗಳಲ್ಲಿ ವಿವಿಧ ವರ್ಗದ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನಿಗದಿ ಪಡಿಸಲಾಗಿದೆ.

1. ರೆಸಿಡೆನ್ಷಿಯಲ್ ಹೋಟೆಲ್ಸ್ ಮತ್ತು ಈಟಿಂಗ್ ಹೌಸೆಸ್.
2. ಟೈಲರಿಂಗ್.
3. ಕಾಫಿ ಕ್ಯೂರಿಂಗ್.
4. ಫಿಲಂ ಇಂಡಸ್ಟ್ರಿ.
5. ಅಗರಬತ್ತಿ.
6. ಕಾಟನ್ ಜಿನ್ನಿಂಗ್ ಆಂಡ್ ಪ್ರೆಸ್ಸಿಂಗ್.